ಆ) ಅಭಿವೃದ್ಧಿ ಸಾಲ ಮತ್ತು ಸಹಾಯಧನವನ್ನು ಪಡೆಯಂದೇ ಇರುವ ಘಟಕಗಳ ಸಂಖ್ಯೆ ಎಷ್ಟು ಹಾಗೂ ಬಿಡುಗಡೆ ಮಾಡಬೇಕಾದ ಅಭಿವೃದ್ಧಿ ಸಾಲದ ಹಾಗೂ ಸಹಾಯಧನದ ಮೊತ್ತವೆಷ್ಟು?

ಇ) ಸರ್ಕಾರವು ಅಂತಹ ಘಟಕಗಳಿಗೆ ಸಾಲದ ಹಾಗೂ ಸಹಾಯಧನದ ಮೊತ್ತವನ್ನು ಬಿಡುಗಡೆ ಮಾಡುವುದೇ, ಹಾಗಿದ್ದಲ್ಲಿ ಯಾವಾಗ ಬಿಡುಗಡೆ ಮಾಡಲಾವುದು?

ಈ) ಇಲ್ಲದಿದ್ದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಹೌದು.

ಆ) ೧. ಕೇಂದ್ರ ಸರಕಾರದ ಸಹಾಯಧನ ;

ಸಣ್ಣ ಪ್ರಮಾಣದ ಘಟಕ ೪೮
ಮೊತ್ತ ರೂ. ೭೮,೫೫,೨೧೦

ಅಭಿವೃದ್ಧಿ ಸಾಲ ;

೨. ಸಣ್ಣ ಪ್ರಮಾಣದ ಘಟಕಗಳು : ೩೫
ಮೊತ್ತ ರೂ. ೩೪,೮೦,೦೦೦-೦೦
೨. ಮಧ್ಯಮ ಪ್ರಮಾಣದ ಘಟಕಗಳು : ಸಂಖ್ಯೆ ೧

ಮೊತ್ತ ರೂ. ೭.೯೦ ಲಕ್ಷ ರೂ.ಗಳು

ಇ) ಹಣಕಾಸು ಪರಿಸ್ಥಿತಿ ಉತ್ತಮಗೊಂಡಾಗ ಹಣ ಬಿಡುಗಡೆ ಮಾಡಲಾಗುವುದು.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಸಭೆಯಲ್ಲಿ ಮಂಡಿಸಲಾದ ಕಾಗದ ಪತ್ರಗಳು

೧. ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು) ಅವರ ಪರವಾಗಿ ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಚಿವರು).—

ಅ) ಭಾರತ ಸಂವಿಧಾನದ ಅನುಚ್ಛೇದದ ೩೫೫(೨)ರ ಮೇರೆಗೆ—

ಕರ್ನಾಟಕ ಜಾಗೃತ ಆಯೋಗದ ೧೯೮೪-೮೫ರ ಹಾಗೂ ೧೯೮೫-೮೬ನೇ ಸಾಲುಗಳ ವಾರ್ಷಿಕ ವರದಿಗಳನ್ನು ಸಭೆಯಲ್ಲಿ ಮಂಡಿಸಿದೆವು.

ಆ) ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ ೧೯೭೪ನೆಯ ೬೯(೨) ಕಲಮಿನ ಮೇರೆಗೆ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ೧೯೮೬-೮೭ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯಲ್ಲಿ ಮಂಡಿಸಿದೆವು.

೨. ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಚಿವರು) —ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿ).—ಅವರ ಪರವಾಗಿ

ಅ) ೧೯೬೪ನೇ ಇಸವಿಯ ಕರ್ನಾಟಕ ಭೂ ಕಂದಾಯ ೧೯೧ (೨) ಕಲಮಿನ ಮೇರೆಗೆ.—

೧. ೧೯೮೬-೮೭ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ೨೪ ಗ್ರಾಮಗಳಿಗೆ ಭೂ ಕಂದಾಯ ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ೧೯೮೮ನೇ ಫೆಬ್ರವರಿ ೨೬ನೇ ದಿನಾಂಕದಂದು ಹೊರಡಿಸಲಾದ ಆರ್.ಡಿ. ೮ ಟಿ.ಆರ್.ಎಂ. ೮೮ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯಲ್ಲಿ ಮಂಡಿಸಿದೆವು.

೨. ೧೯೮೬-೮೭ನೇ ಸಾಲಿನಲ್ಲಿ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ೧೨೭ ಗ್ರಾಮಗಳಿಗೆ ಭೂ ಕಂದಾಯ ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ೧೯೮೮ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯು ಮಂಡಿಸಿದೆ.

೩. ೧೯೮೬-೮೭ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯ ಶಿಗ್ಗಾಂವ್ ತಾಲ್ಲೂಕಿನ ೫೧ ಗ್ರಾಮಗಳಿಗೆ ಭೂ ಕಂದಾಯ ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ೧೯೮೮ನೇ ಮಾರ್ಚ್ ೨ನೇ ದಿನಾಂಕದಂದು ಹೊರಡಿಸಲಾದ ಆರ್.ಡಿ. ೨ ಟಿಆರ್ಎಂ ೮೮ನೇ ಕ್ರಮಾಂದ ಅಧಿಸೂಚನೆಯನ್ನು ಸಭೆಯು ಮಂಡಿಸಿದೆ.

೪. ೧೯೮೬-೮೭ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ೧೩೪ ಗ್ರಾಮಗಳಿಗೆ ಭೂ ಕಂದಾಯ ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ೧೯೮೮ನೇ ಫೆಬ್ರುವರಿ ೨೪ನೇ ದಿನಾಂಕದಂದು ಹೊರಡಿಸಲಾದ ಆರ್.ಡಿ. ೩೭ ಟಿಆರ್ಎಂ ೮೭ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯು ಮಂಡಿಸಿದೆ.

೫) ೧೯೮೬-೮೭ನೇ ಸಾಲಿನಲ್ಲಿ ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ೧೦೭ ಗ್ರಾಮಗಳಿಗೆ ಭೂ ಕಂದಾಯ ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ೧೯೮೮ನೇ ಫೆಬ್ರುವರಿ ೨೫ನೇ ದಿನಾಂಕದಂದು ಹೊರಡಿಸಲಾದ ಆರ್.ಡಿ. ೪೨ ಟಿ.ಆರ್.ಎಂ. ೮೭ನೇ ಕ್ರಮಾಂದ ಅಧಿಸೂಚನೆಯನ್ನು ಸಭೆಯು ಮಂಡಿಸಿದೆ.

೬. ೧೯೮೬-೮೭ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯ ತುಮಕೂರು ತಾಲ್ಲೂಕಿನಲ್ಲಿರುವ ೪೦ ಗ್ರಾಮಗಳಿಗೂ ಭೂ ಕಂದಾಯ ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ೧೯೮೮ನೇ ಫೆಬ್ರುವರಿ ೨೬ನೇ ದಿನಾಂಕದಂದು ಹೊರಡಿಸಲಾದ ಆರ್.ಡಿ. ೩೬ ಟಿಆರ್ಎಂ ೮೭ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯು ಮಂಡಿಸಿದೆ.

೭. ೧೯೮೬-೮೭ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ೨೯ ಗ್ರಾಮಗಳಿಗೂ ಭೂ ಕಂದಾಯ ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ೧೯೮೮ನೇ ಫೆಬ್ರುವರಿ ೨೫ನೇ ದಿನಾಂಕದಂದು ಹೊರಡಿಸಲಾದ ಆರ್.ಡಿ. ೩ ಟಿಆರ್ಎಂ. ೮೮ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯು ಮಂಡಿಸಿದೆ.

೮. ೧೯೮೬-೮೭ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ೭ ಗ್ರಾಮಗಳಿಗೆ ಭೂ ಕಂದಾಯ ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ೧೯೮೮ನೇ ಫೆಬ್ರುವರಿ ೨೫ನೇ ದಿನಾಂಕದಂದು ಹೊರಡಿಸಲಾದ ಆರ್.ಡಿ. ೭ ಟಿಆರ್ಎಂ ೮೮ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯು ಮಂಡಿಸಿದೆ.

೯. ೧೯೮೬-೮೭ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ೨೪ ಗ್ರಾಮಗಳಿಗೆ ಭೂ ಕಂದಾಯ ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ೧೯೮೮ನೇ ಫೆಬ್ರುವರಿ ೨೫ನೇ ದಿನಾಂಕದಂದು ಹೊರಡಿಸಲಾದ ಆರ್.ಡಿ. ೪ ಟಿಆರ್ಎಂ ೮೮ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯು ಮಂಡಿಸಿದೆ.

೧೦. ೧೯೮೬-೮೭ನೇ ಸಾಲಿನಲ್ಲಿ ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ೧೪ ಗ್ರಾಮಗಳಿಗೆ ಭೂ ಕಂದಾಯ ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ೧೯೮೮ನೇ ಫೆಬ್ರುವರಿ ೨೫ನೇ ದಿನಾಂಕದಂದು ಹೊರಡಿಸಲಾದ ಆರ್.ಡಿ. ೫ ಟಿಆರ್ಎಂ ೮೮ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯು ಮಂಡಿಸಿದೆ.

೮) ೧೯೭೬ನೇ ಇಸವಿಯ ಕರ್ನಾಟಕ ಎಪಿಲೇಟ್ ಟ್ರಿಬ್ಯುನಲ್ ಶಾಸನದ ೧೪ (೩) ಕಲಮಿನ ಮೇರೆಗೆ ೧೯೮೭ನೇ ಇಸವಿಯ ಕರ್ನಾಟಕ ಅಪೀಲು ನ್ಯಾಯಾಧೀಕರಣ (ತಿದ್ದುಪಡಿ) ನಿಯಮಕ್ಕೆ ಸಂಬಂಧಿಸಿದಂತೆ ದಿನಾಂಕ ೧೮-೨-೧೯೮೮ರಂದು ಹೊರಡಿಸಲಾದ ಆರ್ಡಿ ೧೬ ಆಟಿಎ ೮೭ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯು ಮಂಡಿಸಿದೆ.

೩. ಶ್ರೀ ಜೆ.ಹೆಚ್. ಪಟೇಲ್ (ಭಾರಿ ಮತ್ತು ಬೃಹತ್ ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿ).—ಅವರ ಪರವಾಗಿ ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಸಚಿವರು) ಮಂಡಿಸಿದರು.

೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧೯(ಎ)ನೇ ಕಲಮಿನ ಮೇರೆಗೆ

೧. ೧೯೮೬-೮೭ನೇ ಸಾಲಿನ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ ೭ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುವುದು.

೨. ೧೯೮೬-೮೭ನೇ ಸಾಲಿನ ಕರ್ನಾಟಕ ರೇಷ್ಮೆ ಮಾರಾಟಮಂಡಲಿ ನಿಯಮಿತದ ೮ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುವುದು.

೩. ೧೯೮೫ನೇ ಮಾರ್ಚ್ ೩೧ರಂದು ಕೊನೆಗೊಳ್ಳುವ ಲೆಕ್ಕಪತ್ರದ ಬಗ್ಗೆ ೧೦ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುವುದು.

೪. ೧೯೮೬-೮೭ನೇ ಸಾಲಿನ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ನಿಯಮಿತದವರ ೪೨ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುವುದು.

ಅ) ೧೯೪೯ರ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮ (೧೯೪೯ರ ಕ್ರಮಾಂಕ ೯೦ರ) ೪೪ನೇ) ಅಧಿನಿಯಮ ೩೫ನೇ ಪ್ರಕರಣ (೧)ನೇ ಉಪ-ಪ್ರಕರಣದನ್ವಯ,

೧೯೮೬-೮೭ನೇ ಸಾಲಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುವುದು.

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿ) ಅವರ ಪರವಾಗಿ ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಸಚಿವರು).—ಮಂಡಿಸಿದರು.

೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧೯(ಎ)ನೇ ಕಲಮಿನ ಮೇರೆಗೆ.—

೧೯೮೫-೮೬ನೇ ಇಸವಿಯ ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುವುದು.

ಶ್ರೀ ಎಂ. ರಘುಪತಿ (ಬಂದರು ಮತ್ತು ಮೀನುಗಾರಿಕೆ ಮಂತ್ರಿ).—ಅವರು

೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧೯(ಎ) ಕಲಮಿನ ಮೇರೆಗೆ.

೧೯೮೭-೮೮ನೇ ಸಾಲಿನ ಕರ್ನಾಟಕ ಒಳನಾಡು ಮೀನಂಗಾರಿಕೆ ಅಭಿವೃದ್ಧಿ ನಿಗಮ (ನಿ)ದ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುವುದು.

ಶ್ರೀ ಎಂ. ಪಿ. ಪ್ರಕಾಶ್ (ವಾರ್ತಾ, ಪ್ರವಾಸೋದ್ಯಮ ಸಂಸ್ಕೃತಿ ಮತ್ತು ಬೆಂಗಳೂರು ಅಭಿವೃದ್ಧಿ ಮಂತ್ರಿ).—ಅವರು

ಅ) ೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೫೪(೧) (ಎ)ನೇ ಕಲಮಿನ ಮೇರೆಗೆ,

೧೯೮೫-೮೬ನೇ ಇಸವಿಯ ಶ್ರೀ ಕಂಠೀರವ ಸ್ಟುಡಿಯೋ ನಿಗಮದ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುವುದು.

ಆ) ೧೯೬೪ನೇ ಇಸವಿಯ ಕರ್ನಾಟಕ ಸಿನಿಮಾ (ನಿಯಂತ್ರಣ) ಶಾಸನದ ೨೦ನೇ ಕಲಮಿನ ಮೇರೆಗೆ.

೧. ಭಾರತ ಸರ್ಕಾರದ ಕಾರ್ಮಿಕ ಕಲ್ಯಾಣ ಆಯುಕ್ತರಿಂದ ಶಿಕ್ಷಣದ ಬಗ್ಗೆ ಕಳುಹಿಸಿರುವ ಚಲನಚಿತ್ರವನ್ನು ಪ್ರದರ್ಶಿಸಲು ವಿನಾಯಿತಿ ನೀಡುವುದರ ಬಗ್ಗೆ ದಿನಾಂಕ ೧೧ನೇ ಫೆಬ್ರುವರಿ ೧೯೮೮ರಂದು ಹೊರಡಿಸಲಾದ ಹೆಚ್.ಡಿ. ೨೩ ಸಿ.ಎನ್.ಎ. ೮೭ನೇ ಕ್ರಮಾಂಕದ ಆದೇಶವನ್ನು ಸಭೆಯ ಮುಂದಿಡುವುದು,

೨) ಬಳ್ಳಾಪುರ ಉದ್ದಿಮೆಂ, ಬೆಣಗಾ, ತಾಲ್ಲೂಕ್. ಕಾರವಾರ ಇವರ ಸಭಾಂಗಣದಲ್ಲಿ ೩೫ ಎಂ.ಎಂ. ಚಲನಚಿತ್ರ ಪ್ರದರ್ಶಿಸಲು ವಿನಾಯಿತಿ ನೀಡುವುದರ ಬಗ್ಗೆ ದಿನಾಂಕ ೮ನೇ ಫೆಬ್ರುವರಿ

೧೯೮೮ರಂದು ಹೊರಡಿಸಲಾದ ಹೆಚ್.ಡಿ. ೨೬೯ ಸಿ.ಎಸ್.ಎಲ್. ೭೦ನೇ ಕ್ರಮಾಂಕದ ಆದೇಶವನ್ನು ಸಭೆಯ ಮುಂದಿಡುವುದು.

೩. ಕರ್ನಾಟಕ ರಾಜ್ಯ ನೌಕರರ ಸಾಮೂಹಿಕ ವಿಮಾ ಯೋಜನೆ (ಎರಡನೇ ತಿದ್ದುಪಡಿ) ನಿಯಮ ೧೯೮೭ಕ್ಕೆ ಸಂಬಂಧಿಸಿದಂತೆ ೧೯೮೭ನೇ ಡಿಸೆಂಬರ್ ೨೮ರಂದು ಹೊರಡಿಸಲಾದ ಸಂಖ್ಯೆ ಆರ್ಥಿಕ ೩. ಎಸ್.ಆರ್.ಪಿ. (ಸೇ) ೮೭ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುವುದು.

೪. ಶ್ರೀ ಹನುಮಪ್ಪ ಮಾಲೀಕರು, ಮದುರಾಂಬ ಸಂಚಾರಿ ಚಿತ್ರಮಂದಿರ ಹಸ್ಕೂರ್, ಆನೇಕಲ್ ತಾಲ್ಲೂಕು, ಅರೆ ಖಾಯಂ ಚಿತ್ರ ಮಂದಿರವನ್ನಾಗಿ ಪರಿವರ್ತಿಸುವ ಬಗ್ಗೆ ಅರ್ಜಿ ಸಲ್ಲಿಸಿರುವಲ್ಲಿ ಆಗಿರುವ ವಿಳಂಬವನ್ನು ಮನ್ನಾ ಮಾಡುವುದಕ್ಕೆ ಸಂಬಂಧಿಸಿದಂತೆ ೧೯೮೮ನೇ ಮಾರ್ಚ್ ೨೨ನೇ ದಿನಾಂಕದಂದು ಹೊರಡಿಸಲಾದ ಹೆಚ್.ಡಿ. ೧೧ ಸಿಎಸ್‌ವಿ ೮೮ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುವುದು.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಸಚಿವರು) ಅವರ ಪರವಾಗಿ ಶ್ರೀ ಆರ್.ವಿ. ದೇಶಪಾಂಡೆ (ಕೃಷಿ ಸಚಿವರು).—

೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧೩(ಎ)ನೇ ಕಲಮಿನ ಮೇರೆಗೆ.

೧೯೮೫-೮೬ನೇ ಸಾಲಿನ ಕರ್ನಾಟಕ ಕೃಷಿ ಕೈಗಾರಿಕೆಗಳ ಆಗ್ರೋ ಇಂಡಸ್ಟ್ರೀಸ್ ನಿಗಮ ನಿಯಮಿತ ಇವರ ೧೯ನೇ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮುಂದಿಡುವುದು.

ಶ್ರೀ ಸಿದ್ಧರಾಮಯ್ಯ (ಪಶುಸಂಗೋಪನಾ ಮಂತ್ರಿ). —ಅವರು

೧೯೭೩ನೇ ಇಸವಿಯ ಕರ್ನಾಟಕ ಕುರಿ ಮಂತ್ತು ಕುರಿ ಅಭಿವೃದ್ಧಿ ಕಾಯಿದೆ ೨೪ರ ಮೇರೆಗೆ.

೧೯೮೬-೮೭ನೇ ಸಾಲಿನ ಕರ್ನಾಟಕ ಕುರಿ ಮತ್ತು ಉತ್ಪನ್ನಗಳ ಅಭಿವೃದ್ಧಿ ಮಂಡಲಿಯ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುವುದು.

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಮಂತ್ರಿ) ಅವರು.—

೧೯೫೫ನೇ ಇಸವಿಯ ಕರ್ನಾಟಕ ಸಹಕಾರಿ ಸಂಘಗಳ ಶಾಸನದ ೧೫೯ನೇ ಕಲುಮಿನ ಮೇರೆಗೆ.

ಬೆಳಗಾಂ ಜಿಲ್ಲೆ ಸೆಂಟ್ರಲ್ ಸಹಕಾರಿ ಬ್ಯಾಂಕ್ ೧೯೫೫ನೇ ಇಸವಿಯ ಕರ್ನಾಟಕ ಸಹಕಾರಿ ಸಂಘಗಳ ಶಾಸನದ ೬೭ನೇ ಕಲಮನ್ನು ಕೆಲವು ಮಾರ್ಪಾಡಿನೊಂದಿಗೆ ಅನ್ವಯಿಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ ೩೦-೩-೧೯೮೮ರಂದು ಹೊರಡಿಸಲಾದ ಸಿ.ಎಂ ಡಬ್ಲ್ಯೂ. ೩೦೦ ಸಿ,ಎಲ್.ಎಂ. ೮೭ನೇ ಕ್ರಮಾಂಕದ ಆದೇಶವನ್ನು ಸಭೆಯ ಮುಂದಿಡುವುದು.

ಶ್ರೀ ರಮೇಶ್ ಚಂದ್ರಪ್ಪ ಜಿಗಜಿಣಗಿ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಮಂತ್ರಿ) ಅವರು.—

೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧೯ (ಎ) ಕಲಮಿನ ಮೇರೆಗೆ,

೧೯೮೪-೮೫ನೇ ಸಾಲಿನ ದಿ ಹುಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ ೫೯ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುವುದು.

ಶ್ರೀ ಜಿ. ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿ ಅವರ ಪರವಾಗಿ ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಸಚಿವರು),—ಮಂಡಿಸಿದರು.

೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧೯ (ಎ) ಕಲಮಿನ ಮೇರೆಗೆ.—

ಆ) ೧೯೮೫-೮೬ನೇ ಸಾಲಿನ ಕರ್ನಾಟಕ ಪಲ್ಪ್‌ವುಡ್ ನಿಯಮಿತದ ಮೊದಲನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುವುದು.

ಆ) ೧೯೮೫-೮೬ನೇ ಸಾಲಿನ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುವುದು.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.